## ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 665

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : 20-02-2024.

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಯಾವಾಗ ಜವಳಿ ನೀತಿಯನ್ನು ರಚಿಸಲಾಗಿತ್ತು; ಪ್ರಸ್ತುತ ಸ್ಥಿತಿಯಲ್ಲಿ ರಾಜ್ಯಕ್ಕೆ ಹೊಸ ಜವಳಿ ನೀತಿಯನ್ನು ರಚಿಸಲು ಸರ್ಕಾರ ಯೋಚಿಸಿದೆಯೇ; ಹಾಗಿದ್ದಲ್ಲಿ ಹೊಸ ಜವಳಿ ನೀತಿಯನ್ನು ಜಾರಿಗೆ ತರಲಾಗುವುದು ಯಾವಾಗ; | ರಾಜ್ಯದಲ್ಲಿ ದಿನಾಂಕ:04.11.2019 ರಂದು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ನ್ನು ರೂಪಿಸಿ ಜಾರಿಗೊಳಿಸಲಾಗಿದೆ. ಸದರಿ ನೀತಿಯ ಅವಧಿ ಮುಗಿದ ನಂತರ ಹೊಸ ಜವಳಿ ನೀತಿಯನ್ನು ಸರ್ಕಾರ ಜಾರಿಗೆ ತರುತ್ತದೆ. |
| (ಆ) | ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನ ಗೊಳಿಸಲಾದ ಯೋಜನೆಗಳಾವುವು; (ವಿವರ ನೀಡುವುದು) | ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನ ಗೊಳಿಸಲಾಗುತ್ತಿರುವ ಯೋಜನೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಇ) | ರಾಜ್ಯದಲ್ಲಿ ಸ್ಥಾಪಿತವಾಗಿರುವ ಜವಳಿ ಕಾರ್ಖಾನೆಗಳು ಹಂತ ಹಂತವಾಗಿ ಮುಚ್ಚುವ ಸ್ಥಿತಿ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಬೆಂಗಳೂರು ಜಿಲ್ಲೆ ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿನ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸ್ಥಾಪಿತವಾಗಿರುವ ಜವಳಿ ಕಾರ್ಖಾನೆಗಳು ಹಂತ ಹಂತವಾಗಿ ಮುಚ್ಚುವ ಸ್ಥಿತಿ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಈ) | ರಾಜ್ಯದಲ್ಲಿ ಜವಳಿ ಕಾರ್ಖಾನೆಗಳಿಗೆ ಸರ್ಕಾರದ ವತಿಯಿಂದ ವಿದ್ಯುತ್ ಸಬ್ಸಿಡಿ ನೀಡಲಾಗು ತ್ತಿದೆಯೇ; ಇಲ್ಲವಾದಲ್ಲಿ ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ರಾಜ್ಯದಲ್ಲಿ ಜವಳಿ ಕಾರ್ಖಾನೆಗಳಿಗೆ ಜವಳಿ ನೀತಿ ಅನ್ವಯ ಸರ್ಕಾರದ ವತಿಯಿಂದ ವಿದ್ಯುತ್ ಸಬ್ಸಿಡಿ ನೀಡಲಾಗುತ್ತಿದೆ. |
| (ಉ) | ರಾಜ್ಯದಲ್ಲಿ ಎಷ್ಟು ಜವಳಿ ಪಾರ್ಕ್ ಗಳು ಇವೆ; ಹೊಸ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರ ತೀರ್ಮಾನಿಸಿದೆಯೇ; ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ಹೊಸ ಜವಳಿ ಪಾರ್ಕ್ ನಿರ್ಮಿಸಲಾಗುತ್ತಿದೆ; ಇದಕ್ಕೆ ಖರ್ಚಾಗುವ ಹಣವೆಷ್ಟು?(ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 06 ಕಾರ್ಯನಿರತ ಜವಳಿ ಪಾರ್ಕ್‌ಗಳಿವೆ.<br>08 ಹೊಸ ಜವಳಿ ಪಾರ್ಕ್‌ಗಳ ಸ್ಥಾಪನೆ ವಿವಿಧ ಅನುಷ್ಠಾನ ಹಂತದಲ್ಲಿದೆ. ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

**ಸಂಖ್ಯೆ:CI 32 JAKE 2024**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ-1

ದಿನಾಂಕ:04.11.2019 ರಂದು ಜವಳಿ/ ಸಿದ್ಧ ಉಡುಪು ಉದ್ಯಮದ ಅಭಿವೃದ್ಧಿಗೆ ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ 2019-24 ನ್ನು ರೂಪಿಸಿ ಜಾರಿಗೊಳಿಸಿದೆ, ದಿನಾಂಕ:02.08.2022 ರಂದು ಜವಳಿ ನೀತಿಯನ್ನು ಪರಿಷ್ಕರಣೆ ಮಾಡಲಾಗಿರುತ್ತದೆ. ಜವಳಿ ನೀತಿಯ ಅವಧಿಯಲ್ಲಿ ಸಿದ್ಧ ಉಡುಪು/ ಜವಳಿ ಘಟಕಗಳಿಗೆ ಉತ್ತೇಜನ ನೀಡಲು ಕೆಳಕಂಡ ರಿಯಾಯಿತಿ/ ಪ್ರೋತ್ಸಾಹನಗಳನ್ನು ನೀಡಲಾಗುವುದು.

- ಸಾಲಾಧಾರಿತ ಬಂಡವಾಳ ಸಹಾಯಧನ (10% ರಿಂದ 30% ಸಹಾಯಧನ ಒಟ್ಟು ಬಂಡವಾಳ ಹೂಡಿಕೆಯ ಮೇಲೆ)
- ಬಡ್ಡಿ ಸಹಾಯಧನ (ಮಧ್ಯಮ ಹಾಗೂ ಲಾರ್ಜ್ ಜವಳಿ/ಸಿದ್ಧ ಉಡುಪು ಘಟಕಗಳಿಗೆ ಮೊದಲ 05 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇ.5 ರಷ್ಟು ಬಡ್ಡಿ ಸಹಾಯಧನ)
- ವಿದ್ಯುತ್‌ಚ್ಛಕ್ತಿ ಮರುಪಾವತಿ ಸಹಾಯಧನ (ಅತಿ ಸಣ್ಣ ಮತ್ತು ಸಣ್ಣ ಘಟಕಗಳಿಗೆ ಪ್ರತಿ ಯುನಿಟ್‌ಗೆ ರೂ.1/- to 2/-ರಂತೆ ವಿದ್ಯುತ್ ವೆಚ್ಚದ ಮರುಪಾವತಿ)
- ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ (ಶೇ.75 ರಷ್ಟು ಮಾಲೀಕರ ವಂತಿಕೆ ಮರುಪಾವತಿ)
- ವೇತನ ಸಹಾಯಧನ (ಸಿದ್ಧ ಉಡುಪು ಘಟಕಗಳಿಗೆ ಪ್ರತಿ ಕಾರ್ಮಿಕರಿಗೆ ರೂ2,000/- ರಿಂದ ರೂ.3,000/- ವೇತನ ಸಹಾಯಧನ
- ಶೇ.100 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ & ಪ್ರತಿ ರೂ.1,000/-ಕ್ಕೆ ರೂ.1/-ರ ದರದಲ್ಲಿ ನೋಂದಣಿ ಶುಲ್ಕ ರಿಯಾಯಿತಿ.
- ತ್ಯಾಜ್ಯ ವಿಲೇವಾರಿ ಘಟಕಕ್ಕೆ ಶೇ.50 ರಷ್ಟು ಸಹಾಯಧನ ಅಥವಾ ಗರಿಷ್ಠ ರೂ.5.00 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅದು.
- ಜವಳಿ ಪಾರ್ಕ್ ಮೂಲಭೂತ ಸೌಕರ್ಯಗಳಿಗಾಗಿ ಪ್ರತ್ಯೇಕ ಉದ್ಯಮಿ/ ಎಸ್.ಪಿ.ವಿ. ಮಾದರಿಯಲ್ಲಿರುವ ಯೋಜನಾ ಮೊತ್ತದ ಮೇಲೆ ಶೇ.40% ಅಥವಾ ರೂ.40.00 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಒದಗಿಸುವುದು.
- ಸಾಮಾನ್ಯ ತ್ಯಾಜ್ಯ ವಿಲೇವಾರಿ ಸ್ಥಾವರಕ್ಕೆ ಶೇ.50 ರಷ್ಟು ಸಹಾಯಧನ.

ಜಂಟಿ ನಿರ್ದೇಶಕರು (ಜವಳಿ ನೀತಿ)
ಕೈಮಗ್ಗ ಮತ್ತು ಜವಳಿ

**ಅನುಬಂಧ-2**

**ಕಾರ್ಯನಿರ್ವಹಿಸುತ್ತಿರುವ ಜವಳಿ ಪಾರ್ಕ್‌ಗಳ ವಿವರ:**

| ಕ್ರ. ಸಂ | ಜಿಲ್ಲೆ | ಪಾರ್ಕ್ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಮಾದರಿ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಜವಳಿ ಪಾರ್ಕ್, ದೊಡ್ಡಬಳ್ಳಾಪುರ | 46.5 | ಕೇಂದ್ರ ಸರ್ಕಾರದ ಎಸ್.ಐ.ಟಿ.ಪಿ ಯೋಜನೆ |
| 2 | ಚಿತ್ರದುರ್ಗ | ಮೆ\|\| ಬೈನರಿ ಅಪೆರೆಲ್ ಪಾರ್ಕ್ ಪ್ರೈ. ಲಿ., ಹಿರಿಯೂರು, | 25.17 | ಎಸ್.ಪಿ.ವಿ ನೂತನ ಜವಳಿ ನೀತಿ ಯೋಜನೆ |
| 3 | ಬೆಳಗಾವಿ | ಕುರಣಿ ಟೆಕ್ಸ್ ಟೈಲ್ ಪಾರ್ಕ್ ಪ್ರೈ. ಲಿ., ಬುಗಟೆ ಆಲೂರು, ತಾ: ಹುಕ್ಕೇರಿ, | 18.16 | ಎಸ್.ಪಿ.ವಿ ನೂತನ ಜವಳಿ ನೀತಿ ಯೋಜನೆ |
| 4 | ಬೆಳಗಾವಿ | ಕೆ.ಎಸ್.ಎಸ್.ಐ.ಡಿ.ಸಿ ಟೆಕ್ಸ್‌ಟೈಲ್ ಪಾರ್ಕ್, ಬೋರಗಾಂವ, ತಾ: ನಿಪ್ಪಾಣಿ, | 75.00 | KSSIDC ವತಿಯಿಂದ ಅಭಿವೃದ್ಧಿ |
| 5 | ದಾವಣಗೆರೆ | ದಾವಣಗೆರೆ ಟೆಕ್ಸ್ ಟೈಲ್ ಪಾರ್ಕ್ | 59.00 | KIADB ವತಿಯಿಂದ ಅಭಿವೃದ್ಧಿ |
| 6 | ಬಳ್ಳಾರಿ | ಬಳ್ಳಾರಿ ಟೆಕ್ಸ್‌ಟೈಲ್ ಪಾರ್ಕ್ | 64.26 | KIADB ವತಿಯಿಂದ ಅಭಿವೃದ್ಧಿ |

**ಹೊಸದಾಗಿ ಸ್ಥಾಪಿಸುವ ಜವಳಿ ಪಾರ್ಕ್‌ಗಳ ವಿವರ:**

| ಕ್ರ. ಸಂ | ಜಿಲ್ಲೆ | ಪಾರ್ಕ್ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) | ಮಾದರಿ |
|---|---|---|---|---|---|
| 1 | ಕಲಬುರಗಿ | PM-MITRA ಪಾರ್ಕ್ ಕಲಬುರಗಿ | 1000.00 | 62500.00 | ಕೇಂದ್ರ ಹಾಗೂ ರಾಜ್ಯ ಸರ್ಕಾರದ ಒಡೆತನ (ಪಿ.ಪಿ.ಪಿ) |
| 2 | ಹಾವೇರಿ | ಶಿಗ್ಗಾಂವಿ ಜವಳಿ ಪಾರ್ಕ್ | 58.31 | 2500.00 | ರಾಜ್ಯ ಸರ್ಕಾರದ ಒಡೆತನ |
| 3 | ಹಾವೇರಿ | ರಾಣೆಬೆನ್ನೂರು ಜವಳಿ ಪಾರ್ಕ್ | 16.08 | 1544.00 | ಪಿ.ಪಿ.ಪಿ |

...2

| ಕ್ರ. ಸಂ | ಜಿಲ್ಲೆ | ಪಾರ್ಕ್ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) | ಮಾದರಿ |
|---|---|---|---|---|---|
| 4 | ಧಾರವಾಡ | ನವಲಗುಂದ ಜವಳಿ ಪಾರ್ಕ್ | 15.00 | ಇಲಾಖೆಯ ಹೆಸರಿಗೆ ಭೂಮಿ ಹಸ್ತಾಂತರವಾಗಿರುವುದಿಲ್ಲ. ಆದ್ದರಿಂದ ಯೋಜನಾ ಮೊತ್ತ ನಿಗದಿಯಾಗಿರುವುದಿಲ್ಲ. | ಪಿ.ಪಿ.ಪಿ |
| 5 | ಬಾಗಲಕೋಟೆ | ಗುಳೇದಗುಡ್ಡ ಜವಳಿ ಪಾರ್ಕ್ | 15.00 | ಯೋಜನಾ ಮೊತ್ತ ನಿಗದಿಯಾಗಿರುವುದಿಲ್ಲ. | ಪಿ.ಪಿ.ಪಿ |
| 6 | ರಾಯಚೂರು | ರಾಯಚೂರು ಜವಳಿ ಪಾರ್ಕ್ | 15.00 | 1449.00 | ಪಿ.ಪಿ.ಪಿ |
| 7 | ಉಡುಪಿ | ಕಾರ್ಕಳ ಜವಳಿ ಪಾರ್ಕ್ | 15.00 | 2797.71 | ಪಿ.ಪಿ.ಪಿ |
| 8 | ಬಳ್ಳಾರಿ | ಬಳ್ಳಾರಿ ಜೀನ್ಸ್ ಮತ್ತು ಉಡುಪುಗಳನ್ನು ಉತ್ತೇಜಿಸಲು ಟೆಕ್ಸ್‌ಟೈಲ್ ಪಾರ್ಕ್ – ಕಾರ್ಯನಿರತ ಜವಳಿ ಪಾರ್ಕ್ | 50.00 | ಯೋಜನಾ ಮೊತ್ತ ನಿಗದಿಯಾಗಿರುವುದಿಲ್ಲ. | ಖಾಸಗಿ ಎಸ್.ಪಿ.ವಿ |

ಜಂಟಿ ನಿರ್ದೇಶಕರು (ಜವಳಿ ನೀತಿ)
ಕೈಮಗ್ಗ ಮತ್ತು ಜವಳಿ